ದ್ವಿತೀಯ ವರ್ಷದಲ್ಲಿ (ಸರಿಯಾಗಿ ನೆನಪಿಲ್ಲ) ಓದುತ್ತಿದ್ದ ಸಂದರ್ಭದಲ್ಲಿ ಬರೆದ 'ನವಾಬ್ ಹುಜೂರ್' ಕಥೆಯು ಮಹಾವಿದ್ಯಾಲಯದ ವಾರ್ಷಿಕ ಪತ್ರಿಕೆಯಲ್ಲಿ ಮತ್ತು 'ದೂಸರೀ ಗೋಲೂ ಮಹಾರಾಜ್' ಹಾಗೂ ಇತರ ಎರಡು ಮೂರು ಕಥೆಗಳು 'ಮಧ್ಯಪ್ರದೇಶ ಸಂದೇಶ' ಪತ್ರಿಕೆಯಲ್ಲಿ ಪ್ರಕಟವಾದವು.

ನನ್ನ ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗತೊಡಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಆಗಲೇ ಹೆಸರು ಮಾಡಿದ್ದ ಮುಕ್ತಿಬೋಧರನ್ನು ನಾನು ಭೇಟಿಯಾದ ನಂತರ. ವಾಸ್ತವದಲ್ಲಿ, ನನ್ನ ಅಣ್ಣ ದಿಗ್ವಿಜಯ್ ಅವರು ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದರು. ಅದೇ ಕಾಲೇಜಿನಲ್ಲಿಯೇ ಮುಕ್ತಿಬೋಧ ಅವರೂ ಪಾಠ ಮಾಡುತ್ತಿದ್ದರು. ನನ್ನ ಅಣ್ಣ ಅದೊಂದು ದಿನ ಮುಕ್ತಿಬೋಧರ ಬಳಿ 'ನನ್ನ ತಮ್ಮನೂ ಕವಿತೆಗಳನ್ನು ಬರೆಯುತ್ತಾನೆ. ಆತನಿಗೆ ನಿಮ್ಮ ಸಲಹೆ ಬೇಕು' ಎಂದು ಹೇಳಿದಾಗ ಅವರು – 'ಸರಿ, ಆತ ಬರೆದ ಕವಿತೆಗಳನ್ನು ನನಗೆ ತೋರಿಸಲು ಹೇಳಿ' ಎಂದು ಹೇಳುವ ಮೂಲಕ ತಮ್ಮ ಬೆಂಬಲವನ್ನು ಸೂಚಿಸಿದರು. ಆ ಹೊತ್ತಿಗಾಗಲೇ ಅವರು ಹಿರಿಯ ಕವಿಯಾಗಿ ಗುರುತಿಸಿಕೊಂಡಿದ್ದರು. ಅದುವರೆಗೆ ನಾನು ನನ್ನ ಕವನಗಳನ್ನು ಬೇರೆ ಯಾರಿಗೂ ತೋರಿಸಿರಲಿಲ್ಲ. ಅವುಗಳ ಗುಣಮಟ್ಟದ ಬಗ್ಗೆ ನನಗೇ ಸಮಾಧಾನವಿರಲಿಲ್ಲ. ಅಣ್ಣನ ಸೂಚನೆಯ ಮೇರೆಗೆ, ನನ್ನ ಕವಿತೆಗಳನ್ನು ಮುಕ್ತಿಬೋಧರಿಗೆ ತೋರಿಸಿದೆ. ಅವರು ಕೆಲವು ಸಲಹೆಗಳನ್ನು ನೀಡಿದರು. ಆಗಾಗ ಅವರನ್ನು ಭೇಟಿಯಾಗತೊಡಗಿದೆ ಮತ್ತು ಅವರ ಸಲಹೆಯನ್ನು ಪಡೆಯತೊಡಗಿದೆ. ಅದೊಂದು ದಿನ ಅವರು ನನ್ನ ಎಂಟು ಕವನಗಳನ್ನು ಆಯ್ಕೆ ಮಾಡಿ 'ಕೃತಿ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀಕಾಂತ ವರ್ಮಾ ಅವರಿಗೆ ಕಳುಹಿಸಿದರು. ಅವು ಹಂತಹಂತವಾಗಿ ಆ ಪತ್ರಿಕೆಯಲ್ಲಿ ಪ್ರಕಟವಾದವು. 1971ರಲ್ಲಿ ನನ್ನ ಮೊದಲ ಕವನ ಸಂಕಲನ 'ಲಗ್‌ಭಗ್ ಜೈಹಿಂದ್' ಪ್ರಕಟವಾಯಿತು.

ಕಥೆ-ಕವನಗಳನ್ನು ಬರೆಯುತ್ತಿದ್ದ ನನಗೆ ಕಾದಂಬರಿ ಬರೆಯುವುದಕ್ಕೆ ಪ್ರೇರೇಪಣೆ ನೀಡಿದವರು ಹಿರಿಯ ಸಾಹಿತಿ ಸೋಮದತ್ತರು. 'ಮುಕ್ತಿಬೋಧ ಫೆಲೋಶಿಪ್ ತೆಗೆದುಕೊಂಡರೆ ಪ್ರತಿ ತಿಂಗಳೂ ಒಂದು ಸಾವಿರ ರೂಪಾಯಿ ಶಿಷ್ಯವೇತನ ಸಿಗುತ್ತದೆ. ಒಂದು ವರ್ಷದೊಳಗೆ ಕಾದಂಬರಿಯನ್ನು ಬರೆದುಕೊಡಬೇಕು. ನಿನ್ನಿಂದ ಇದು ಸಾಧ್ಯ' ಎಂದು ಅವರು ಒತ್ತಾಯಿಸಿದ್ದರಿಂದ ನಾನು ಕಾದಂಬರಿ ಬರೆಯುವುದಕ್ಕೆ ಒಪ್ಪಿಕೊಂಡೆ. ಪರಿಣಾಮವಾಗಿ ನಾನು ನನ್ನ ಮೊದಲ ಕಾದಂಬರಿ 'ನೌಕರ್ ಕಿ ಕಮೀಜ್' ಬರೆದು ಮುಗಿಸಿದೆ. 1979ರಲ್ಲಿ ಅದು ಪ್ರಕಟಣೆಯ ಭಾಗ್ಯ ಕಂಡಿತು. ಮುಂದೊಂದು ದಿನ (1999ರಲ್ಲಿ) ಖ್ಯಾತ ಚಲನಚಿತ್ರ ನಿರ್ದೇಶಕ ಮಣಿ ಕೌಲ್ ಅವರು ಈ ಕಾದಂಬರಿಯನ್ನು ಇದೇ ಹೆಸರಿನಲ್ಲಿ ಚಲನಚಿತ್ರವನ್ನೂ ನಿರ್ದೇಶಿಸಿದರು.

◆ **ನಿಮ್ಮ ಕಾವ್ಯದಲ್ಲಿ ಅಲ್ಲಲ್ಲಿ ಗದ್ಯದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅದೇ ರೀತಿಯಲ್ಲಿ ನಿಮ್ಮ ಕಥೆ-ಕಾದಂಬರಿಗಳು ಅನೇಕ ಸಂದರ್ಭಗಳಲ್ಲಿ ಕಾವ್ಯಾತ್ಮಕ ಎನ್ನಿಸುತ್ತವೆ. ಇದರ ಬಗ್ಗೆ ಯಾವತ್ತಾದರೂ ಯೋಚಿಸಿದ್ದೀರಾ?**

ನಾನು ಕವನವನ್ನು ಬರೆಯುವಾಗ ಯಾವತ್ತೂ 'ನಾನು ಕವಿತೆ ಬರೆಯುತ್ತಿದ್ದೇನೆ. ಹಾಗಾಗಿ ಗದ್ಯರೂಪದ ಬಗ್ಗೆ ಯೋಚಿಸಬಾರದು' ಎಂದು ಯೋಚಿಸಿಲ್ಲ. ಹಾಗೆಯೇ, ಗದ್ಯವನ್ನು ಬರೆಯುವಾಗ 'ನಾನು ಗದ್ಯವನ್ನು ಬರೆಯುತ್ತಿದ್ದೇನೆ. ಕಾವ್ಯದಿಂದ ಸಂಪೂರ್ಣವಾಗಿ ಹೊರಬಂದು ಗದ್ಯವನ್ನು ರಚಿಸಬೇಕು' ಎಂದು ಯೋಚಿಸಿಯೂ ಇಲ್ಲ. ಒಂದು ವಿಷಯವನ್ನು ಸ್ಪಷ್ಟಪಡಿಸಲೇಬೇಕು – ಕವನವನ್ನು ಬರೆಯಲೇಬೇಕು ಎಂದು ಕುಳಿತುಕೊಂಡಾಗ ನನ್ನಿಂದ ಕವನದ ರಚನೆ ಸಾಧ್ಯವಾಗದೆಯೂ ಇರಬಹುದು. ನಾವು ಅಂದುಕೊಂಡಾಗ ಕಾವ್ಯ ಸ್ಫುರಿಸುವುದಿಲ್ಲ. ತುಂಬಾ ಹೊತ್ತು ಯೋಚಿಸುತ್ತಲೇ ಇದ್ದುಬಿಡುತ್ತೇನೆ. ಗದ್ಯ ರಚನೆ ಮಾಡುವಾಗ ಬರವಣಿಗೆ ನಿರಂತರವಾಗಿ ಮುಂದುವರಿಯುತ್ತದೆ. ಆದರೆ ಕಾವ್ಯ ರಚಿಸುವಾಗ ನಿಂತುಬಿಡುತ್ತೇನೆ. ಕವನದ ಎರಡು ಸಾಲುಗಳನ್ನು ಬರೆದು ಮೂರ್ನಾಲ್ಕು ದಿನಗಳ ನಂತರ ಅದನ್ನು ಮುಂದುವರಿಸಿದ ಉದಾಹರಣೆಯೂ ಇದೆ. ಕೆಲವೊಮ್ಮೆ ಒಂದೇ 'ಸಿಟ್ಟಿಂಗ್'ನಲ್ಲಿ ಕವನವನ್ನು ಬರೆದಿದ್ದೇನೆ.

◆ **ವೈಚಾರಿಕತೆಯ ವಿಷಯದಲ್ಲಿ ನಿಮ್ಮ ನಿಲುವು**